

ಮದುವೆಯಾಗಲು ವಯಸ್ಸಿನ ನಿರ್ಬಂಧವಿದೆ. ಹುಡುಗಿಗೆ 18 ವರ್ಷ ವಯಸ್ಸು ತುಂಬುವವರೆಗೂ ಹುಡುಗನಿಗೆ 21 ವರ್ಷ ವಯಸ್ಸು ತುಂಬುವವರೆಗೂ ಮದುವೆ ಮಾಡಿದರೆ ಅದು ಬಾಲ್ಯವಿವಾಹ ಎನಿಸಿಕೊಳ್ಳುತ್ತದೆ ಮತ್ತು ಅದೊಂದು ಶಿಕ್ಷಾರ್ಹ ಅಪರಾಧವಾಗಿರುತ್ತದೆ. ಆದರೆ 18 ವರ್ಷ ವಯಸ್ಸು ತುಂಬಿದ ಯುವಕನೊಬ್ಬ ಲಿವಿನ್ ರಿಲೇಷನ್‌ಶಿಪ್‌ನಲ್ಲಿ ಇರಲು ಬಯಸಿದರೆ ಕಾನೂನು ಅದನ್ನು ಒಪ್ಪಿದೆ. ಆ ಯುವಕ ಸಂಗಾತಿಯಾಗಿ ಬಯಸುವ ವ್ಯಕ್ತಿಯು ಯಾವುದೇ ಲಿಂಗಕ್ಕೆ ಸೇರಿದ ವಯಸ್ಕ ಇದ್ದರೆ ಆದೀತು. ಆದರೆ ಆ ಯುವಕ 21 ವರ್ಷ ವಯಸ್ಸು ತುಂಬುವವರೆಗೂ ಅದೇ ಸಂಗಾತಿಯೊಡನೆಯಾಗಲಿ ಬೇರೊಬ್ಬರ ಜೊತೆಯಾಗಲೀ ಮದುವೆಯಾಗಲು ಅವಕಾಶ ಇರುವುದಿಲ್ಲ. ಲಿವಿನ್ ರಿಲೇಷನ್‌ಶಿಪ್‌ನಲ್ಲಿ ಇರುವ ಹೆಣ್ಣು ವಯಸ್ಸಿನಲ್ಲಿ ಗಂಡಿಗಿಂತ ದೊಡ್ಡವಳಿದ್ದರೂ ಕಾನೂನಿನ ತೊಡಕು ಇರುವುದಿಲ್ಲ. ಅವಿವಾಹಿತರು, ವಿಚ್ಛೇಧನ ಪಡೆದುಕೊಂಡವರು, ಪತಿ ಅಥವಾ ಪತ್ನಿಯನ್ನು ಕಳೆದುಕೊಂಡವರು ಕೂಡ ಲಿವಿನ್ ರಿಲೇಷನ್‌ಶಿಪ್‌ನಲ್ಲಿ ಇರಲು ಕಾನೂನಿನ ಸಮ್ಮತಿ ಇದೆ.

ಎಲ್ಲಾ ವಿವಾಹಗಳನ್ನು ಕಡ್ಡಾಯವಾಗಿ ನೊಂದಾಯಿಸಬೇಕು ಎನ್ನುವ ಕಾನೂನು ನಮ್ಮಲ್ಲಿ ಇದೆ. ಆದರೆ ಲಿವಿನ್ ರಿಲೇಷನ್‌ಶಿಪ್‌ಗಳ ಬಗ್ಗೆ ಹೀಗೆ ನೊಂದಾಯಿಸಿಕೊಳ್ಳುವ ಯಾವುದೇ ಕಾನೂನು ಇರುವುದಿಲ್ಲ. ವಿದೇಶಗಳಲ್ಲಿ ಇಂತಹ ಒಪ್ಪಿತ ಸಂಬಂಧಗಳಲ್ಲಿ ವಾಸಿಸಲು ಬಯಸುವ ಇಬ್ಬರು ವ್ಯಕ್ತಿಗಳು 'Cohabitation Certificate' ಎನ್ನುವ ಕರಾರು ಮಾಡಿಕೊಳ್ಳಬಹುದು ಆದರೆ ನಮ್ಮಲ್ಲಿ ಇದು ಕಡ್ಡಾಯವಲ್ಲ. ಆದರೂ ಇತ್ತೀಚೆಗೆ ಇಂತಹ ಕರಾರು ದಾಖಲೆಯನ್ನು ನೋಟರಿಗಳ ಸಮಕ್ಷಮದಲ್ಲಿ ಮಾಡಿಸಿಕೊಳ್ಳಲು ಸಂಬಂಧಪಟ್ಟವರು ಹೆಚ್ಚು ಆಸಕ್ತಿ ತೋರುತ್ತಿದ್ದಾರೆ. ಕೆಲವು ರಾಜ್ಯಗಳ ಉಚ್ಚನ್ಯಾಯಾಲಯಗಳು ಸಂದರ್ಭಾನುಸಾರ ಈ ದಾಖಲೆಯನ್ನು ಪರಿಗಣಿಸಿದ್ದರೂ ಬಹುಪಾಲು ನ್ಯಾಯಾಲಯಗಳು ಲಿವಿನ್ ರಿಲೇಷನ್‌ಶಿಪ್ ಎನ್ನುವುದನ್ನು ಕರಾರು ಎನ್ನುವುದಾಗಿ ಒಪ್ಪದಿರುವುದರಿಂದ ಇಂತಹ ದಾಖಲೆಯನ್ನು ತಿರಸ್ಕರಿಸಿದ ಪ್ರಕರಣಗಳೂ ಇವೆ. ಈ ನಿಟ್ಟಿನಲ್ಲಿ **Moya Khatun Vs. State of Punjab** (2015) ಈ

